ಉದ್ದೇಶಗಳನ್ನು ಸಾಧಿಸುವುದಕ್ಕೆ ಅತ್ಯವಶ್ಯಕವಾದುವು. ಬರಿ ದೀರ್ಘಕಾಲದ ಗುರಿಗಳ ಕಡೆಗೇ ಗಮನವಿತ್ತರೆ, ಅದರಿಂದ ಒಳಿತಿನ ಬದಲು ಕೆಡುಕೇ ಜಾಸ್ತಿ. ದೀರ್ಘಕಾಲದ ಗುರಿಗಳು ನಿಮ್ಮ ಜೀವನಪ್ರಯಾಣದ ದಿಕ್ಕನ್ನು ನಿರ್ಧರಿಸುತ್ತವೆ. ಆದರೆ ನೀವು ಎಚ್ಚರದಿಂದ ಇರದಿದ್ದರೆ, ಅವು ನಿಮ್ಮ ಪಯಣದ ಆನಂದದ ಹಾದಿಯಲ್ಲಿ ಕಲ್ಲುಗಳಾಗಿ ಪರಿಣಮಿಸಬಹುದು. ಆದ್ದರಿಂದ ಯಾವತ್ತೂ, ನಿಮಗೆ ಸಾಧ್ಯವಾಗುವ ತಾತ್ಕಾಲಿಕ ಗುರಿಗಳನ್ನೇ ಇಟ್ಟುಕೊಳ್ಳಿ. ಏನನ್ನು ಅಧ್ಯಯನ ಮಾಡಬೇಕು ಎಂದು ನಿರ್ಧರಿಸಿಕೊಳ್ಳುವುದು ಮಾತ್ರವೇ ಸಾಕಾಗುವುದಿಲ್ಲ. ಪ್ರತಿಯೊಂದು ಅಧ್ಯಯನ ಅವಧಿ ಅಥವಾ ಘಟಕದಲ್ಲಿ, "ಎಷ್ಟು ಓದಬೇಕು?" ಮತ್ತು "ಹೇಗೆ ಓದಬೇಕು?" ಎನ್ನುವುದನ್ನು ನಿರ್ಧರಿಸಿಕೊಳ್ಳುವುದೂ ಬಹಳ ಮುಖ್ಯವಾದುದು.

**೫. ಹೋಂವರ್ಕ್ ಸಮಸ್ಯೆ (The issue of Homework):** ಶಾಲೆಯಲ್ಲಿ ಬಹಳಷ್ಟು ಹೋಂವರ್ಕ್ ಕೊಡುವುದರಿಂದ, ಪರಿಣಾಮಕಾರಿಯಾಗಿ ಓದುವುದಕ್ಕೆ ಸಾಕಷ್ಟು ಸಮಯ ಸಿಕ್ಕುತ್ತಿಲ್ಲ ಎಂದು ಪೋಷಕರು ಮತ್ತು ವಿದ್ಯಾರ್ಥಿಗಳು ದೂರುವುದು ವಾಡಿಕೆ. ಈ ಮನೋಭಾವ ಸರಿಯಲ್ಲ. ಹಾಗೆ ದೂರುವವರು ಹೋಂವರ್ಕ್ ಕೂಡ ಅಧ್ಯಯನದ ಅಂಗವೇ ಎಂದು ಪರಿಗಣಿಸುವುದಿಲ್ಲ. ಈ ರೀತಿಯ ತಪ್ಪು ಅಭಿಪ್ರಾಯ ಏಕೆ ಬಂದಿದೆಯೆಂದರೆ, ಬಹುತೇಕ ವಿದ್ಯಾರ್ಥಿಗಳು ಹೋಂವರ್ಕ್ ಅನ್ನು ಯಾಂತ್ರಿಕವಾಗಿ ಮಾಡುತ್ತಾರೆಯೇ ಹೊರತು, ಮನಸ್ಸಿಷ್ಟು, ಶ್ರದ್ಧೆಯಿಂದ ಮಾಡುವುದಿಲ್ಲ. ಇದನ್ನು ಗಂಭೀರವಾಗಿ ಯೋಚಿಸಿರಿ. ಹೋಂವರ್ಕ್ ಅನ್ನು ಪುನರಾವರ್ತನೆಯ ದೃಷ್ಟಿಯಿಂದ ಮಾಡಬೇಕೇ ಹೊರತು, ಬರಿ ಬರೆದು ಒಪ್ಪಿಸುವ ಭಾವನೆಯಿಂದ ಮಾಡಬಾರದು. ಹೋಂವರ್ಕ್ ಮಾಡುತ್ತಲೇ ಅಧ್ಯಯನವನ್ನೂ ಮಾಡಲು ಸಾಧ್ಯ; ಹಾಗೆಯೇ ಮಾಡಬೇಕು ಕೂಡ. ಹೋಂವರ್ಕ್ ಬೇರೆ, ಅಧ್ಯಯನ ಬೇರೆ ಅಲ್ಲ. ಈ ರೀತಿ ಬರೆದು ಪುನರಾವರ್ತನೆ ಮಾಡುವುದರಿಂದ ಓದಿನಲ್ಲಿ ಹೆಚ್ಚು ತನ್ಮಯತೆ ಉಂಟಾಗುತ್ತದೆ ಮತ್ತು ವಿಷಯವು ಚೆನ್ನಾಗಿ ನೆನಪಿನಲ್ಲಿ ಉಳಿಯುತ್ತದೆ; ಇದು ಬರೀ ಕಣ್ಣಾಡಿಸಿ ಓದುವುದಕ್ಕಿಂತ ಎಷ್ಟೋ ಪಾಲು ಮೇಲು ಎಂದು ಪರಿಣತರು ನಿಸ್ಸಂದೇಹವಾಗಿ ರುಜುವಾತುಪಡಿಸಿದ್ದಾರೆ. ಆದರೆ ನಾವು ನಮ್ಮ ಮನಸ್ಸನ್ನು ಇದರಲ್ಲಿ ಚೆನ್ನಾಗಿ ತೊಡಗಿಸಿಕೊಳ್ಳಬೇಕಾದುದು ಅತ್ಯವಶ್ಯ. ಈ ರೀತಿ ತೊಡಗಿಸಿಕೊಳ್ಳಬೇಕಾದರೆ, 'ಹೋಂವರ್ಕ್ ಅನ್ನು ಬೇಗ ಮಾಡಿ ಮುಗಿಸಿಬಿಡಬೇಕು' ಎಂದು ಕಾತರಪಡುವುದನ್ನು ಮೊದಲು ತ್ಯಜಿಸಿ. ಈ ಕೆಲಸವನ್ನು ಮಾಡುವಲ್ಲಿ ಇರುವ ಆನಂದವನ್ನು ಕಂಡುಕೊಳ್ಳಿ. "ನಾವು ಕೆಲಸ ಮಾಡುವ ವಿಧಾನ, ಗುರಿಯಷ್ಟೇ ಮುಖ್ಯವಾದುದು" ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಈ ಮಾತು ಈ ಸಂದರ್ಭದಲ್ಲಿ ಅತ್ಯಂತ ಸೂಕ್ತವಾದುದು.

**೬. ಪ್ರಶ್ನೆಪತ್ರಿಕೆ ಬ್ಯಾಂಕ್ (Question banks) :** ಒಂದು ಪಾಠವನ್ನು ಚೆನ್ನಾಗಿ ಗ್ರಹಿಸುವ ಪರಿಣಾಮಕಾರಿ ವಿಧಾನವೆಂದರೆ, ವಿಷಯಕ್ಕೆ ತಕ್ಕ ಪ್ರಶ್ನೆಗಳನ್ನು ಸಂಗ್ರಹಿಸಿಟ್ಟುಕೊಂಡು, ಅವುಗಳಿಗೆ ಸರಿಯಾದ ಮತ್ತು ಕರಾರುವಾಕ್ಕಾದ ಉತ್ತರಗಳನ್ನು ಗುರುತಿಸಿಟ್ಟುಕೊಳ್ಳುವುದು. ಈಗಾಗಲೇ ಮುದ್ರಣಗೊಂಡ Question Bank ಗಳು ಮತ್ತು ಹಿಂದಿನ ವರ್ಷಗಳ ಪ್ರಶ್ನೆಪತ್ರಿಕೆಗಳು ಇಲ್ಲಿ ಪ್ರಯೋಜನಕ್ಕೆ ಬರುತ್ತವೆ. ಅವು ನಿಮ್ಮ ಅಧ್ಯಯನದ ಪ್ರಯಾಣಕ್ಕೆ ಸರಿಯಾದ ದಿಕ್ಕನ್ನು ತೋರಿಸುತ್ತವೆ.

**೭. ಪುನರಾವರ್ತನೆ (Recapitulation) :** ನೀವು ಓದಿದ್ದನ್ನು ಪುನರಾವರ್ತನೆ ಮಾಡಿಕೊಳ್ಳುವುದಕ್ಕೆ ಸಾಕಷ್ಟು ಸಮಯವನ್ನು ಮೀಸಲಾಗಿಡಿ. ಇದರಿಂದ ನಿಮ್ಮ ಅಧ್ಯಯನಕ್ಕೆ ಪೂರಕ ಶಕ್ತಿ ಒದಗಿದಂತಾಗುತ್ತದೆ. ಇದನ್ನು ನಿಮ್ಮ ಅಧ್ಯಯನದ ಅವಧಿಯಲ್ಲಿ ಅಥವಾ ಕಡೆಯಲ್ಲಿ ನೀವು ಮಾಡಬಹುದು. ಪ್ರತಿನಿತ್ಯವೂ ನೀವು ಅಧ್ಯಯನವೆಂಬ ಕಟ್ಟಡವನ್ನು ಕಟ್ಟುತ್ತಿರುತ್ತೀರಿ. ಪ್ರತಿ ದಿವಸದ ಅಧ್ಯಯನ ಅವಧಿಯೂ, ಅದನ್ನು ಕಟ್ಟಲು ಬೇಕಾದ ಇಟ್ಟಿಗೆಗಳಿದ್ದಂತೆ. ಪುನರಾವರ್ತನೆಯೆಂಬುದು ಅವುಗಳಿಗೆ ಬೆಸುಗೆ ಹಾಕುವ ಸಿಮೆಂಟ್ ಇದ್ದಂತೆ. ಸಿಮೆಂಟ್ ಇಲ್ಲದ ಇಟ್ಟಿಗೆಗಳಿಂದ ಗೋಡೆ ನಿರ್ಮಿಸಲಾಗದು. ಸಿಮೆಂಟಿನ ಗುಣಮಟ್ಟ ಚೆನ್ನಾಗಿದ್ದಷ್ಟೂ ಗೋಡೆ ಭದ್ರವಾಗಿರುತ್ತದೆ. ಅದೇ ರೀತಿ, ಪುನರಾವರ್ತನೆ ಪರಿಣಾಮಕಾರಿಯಾಗಿದ್ದಷ್ಟೂ, ನಿಮ್ಮ ಆತ್ಮವಿಶ್ವಾಸ ಹೆಚ್ಚಾಗುತ್ತದೆ.

**೮.ಅಧ್ಯಯನದ ಪಾಸ್‌ಬುಕ್ (Academic Pass Book):** ಸ್ಥಳೀಯ ಬ್ಯಾಂಕ್‌ನಲ್ಲಿ ನಡೆಸುವ ಹಣಕಾಸು ವ್ಯವಹಾರವನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಲು ಯಾರೂ ಶ್ರಮಪಡಬೇಕಾದ್ದಿಲ್ಲ. ಅದಕ್ಕೆ ಸಹಾಯ ಮಾಡಲು ಬ್ಯಾಂಕಿನ ಪಾಸ್‌ಬುಕ್ ಇದ್ದೇ ಇರುತ್ತದೆ. ಹಾಗೆಯೇ ನಿಮ್ಮ ಅಧ್ಯಯನದ ಪ್ರಗತಿಯನ್ನು ದಾಖಲಿಸಿಕೊಳ್ಳಲು ನೀವು 'ಅಧ್ಯಯನದ ಪಾಸ್‌ಬುಕ್' ಅನ್ನು ಇಟ್ಟುಕೊಳ್ಳುವುದು ಸೂಕ್ತ. ನೀವು ಅಧ್ಯಯನ ಮಾಡಬೇಕಾಗಿರುವ ಎಲ್ಲ ವಿಷಯಗಳಿಗೂ ಅದರಲ್ಲಿ ಕೆಲವು ಪುಟಗಳನ್ನು ನಿಗದಿಮಾಡಿ. ಪ್ರತಿ ಸಲವೂ ಅಧ್ಯಯನ ಅವಧಿ ಮುಗಿದ ನಂತರ, ಅದನ್ನು ದಿನಾಂಕದೊಂದಿಗೆ ಗುರುತು ಮಾಡಿಕೊಳ್ಳಿ. ಪ್ರತಿಸಲವೂ ಆ ವಿಷಯದ ಅಧ್ಯಯನದ ಅವಧಿಯನ್ನು ಆರಂಭಿಸುವುದಕ್ಕಿಂತ ಮುಂಚೆ, ಹಿಂದಿನ ಸಲ ಓದಿದ ವಿಷಯದ ಮುಖ್ಯಾಂಶಗಳನ್ನು ಸ್ವಲ್ಪಕಾಲ ನೆನಪಿಗೆ ತಂದುಕೊಳ್ಳಿ. (ಇದಕ್ಕಾಗಿ *'ಅಧ್ಯಯನ ಅವಧಿಗೆ ಮುಂಚಿನ ಸಿದ್ಧತೆ' ಎಂಬ ಹೆಸರಿನ ಮೂರನೆಯ ಭಾಗವನ್ನು ನೋಡಿ.*)


ಕಲಿಕೆಯೆನ್ನುವುದು ಜೀವನಪರ್ಯಂತ ಮಾಡಬೇಕಾದ ಪವಿತ್ರಕಾರ್ಯ. ನೀವು ನಿಮ್ಮನ್ನು ಅಧ್ಯಯನದಲ್ಲಿ ಹೆಚ್ಚು ಹೆಚ್ಚು ತೊಡಗಿಸಿಕೊಂಡಾಗ, ಓದುವ ವಿಧಾನಗಳನ್ನು ಹೇಗೆ ಉತ್ತಮಗೊಳಿಸಿಕೊಳ್ಳಬಹುದು ಮತ್ತು ನಿಮ್ಮ ಕೌಶಲಗಳನ್ನು ಹೇಗೆ ಇನ್ನೂ ಸುಸಂಸ್ಕೃತಗೊಳಿಸಿಕೊಳ್ಳಬಹುದು ಎನ್ನುವುದು ನಿಮಗೇ ಗೊತ್ತಾಗುವುದು.

ಶ್ರೀರಾಮಕೃಷ್ಣರಂತಹ ಮಹಾತ್ಮರೇ ಹೇಳಿದ್ದಾರೆ, "ನಾನು ಜೀವಿಸಿರುವ ತನಕವೂ ಕಲಿಯುತ್ತಲೇ ಇರುತ್ತೇನೆ" ಎಂದು.

ನೀವೆಲ್ಲರೂ ಆನಂದದಿಂದ ಕಲಿಕೆಯನ್ನು ಕೈಗೊಳ್ಳಿ, ನಿಮಗೆಲ್ಲರಿಗೂ ಮಂಗಳವಾಗಲಿ. **(ಆಧಾರ)** ⌘

# ಸ್ವಾಮಿ ವಿವೇಕಾನಂದರ ಜೀವನದರ್ಶನ – ೫

**ನಿರೂಪಣೆ:** ಸ್ವಾಮಿ ರಾಘವೇಶಾನಂದ ; **ಅನುವಾದ :** ಸಿ.ಎಸ್.ಮಂಗಳಮ್ಮ; **ಮೂಲ ಕಲಾಕೃತಿ :** ಪದ್ಮಾ ವಾಸನ್; **ವರ್ಣಪಾರದರ್ಶಿಕೆ:** ಬಿ.ಕೆ.ಸೋಮಶೇಖರ




ಬಂಡೆಯ ಮೇಲೆ ಕುಳಿತು ಧ್ಯಾನಸ್ಥರಾದಾಗ ಭಾರತದ ಸ್ಪಷ್ಟ ಚಿತ್ರಣ ಅವರಿಗೆ ಗೋಚರವಾಯಿತು. ಭಾರತದ ಹಿರಿಮೆ, ಗತವೈಭವ ಹಾಗೂ ವರ್ತಮಾನಕಾಲದ ದುಃಖ ದೈನ್ಯಾವಸ್ಥೆ ಅವರ ಮನಸ್ಸನ್ನು ತಲ್ಲಣಗೊಳಿಸಿದವು. ಭಾರತವನ್ನು ಜಾಗೃತಿಗೊಳಿಸಬೇಕೆನ್ನುವ ಭಾವನೆಗಳು ಆ ದೇವಮಾನವನ ದಿವ್ಯಮನಸ್ಸಿನಲ್ಲಿ ಪ್ರಜ್ವಲಿಸುವ ಮಿಂಚಿನಂತೆ ಹೊಳೆದವು.


ವಿವೇಕಾನಂದರಲ್ಲಿ ಈಗಾಗಲೇ ಪ್ರಜ್ವಲಿಸುತ್ತಿದ್ದ ಅಧ್ಯಾತ್ಮ ಚಿಂತನೆಯೊಂದಿಗೆ, ದೇಶಪ್ರೇಮದ ಕಾವೂ ಮಿಳಿತಗೊಂಡಿತು.
ಭಾರತಾಂಬೆಯ ಹಿಂದಿನ ಹಿರಿಮೆ ಗರಿಮೆಗಳನ್ನು ಪುನಶ್ಚೇತನಗೊಳಿಸಿಕೊಳ್ಳಬೇಕಾದರೆ, ಇಲ್ಲಿನ ಜನರನ್ನು ಆವರಿಸಿಕೊಂಡಿರುವ ಕಂದಾಚಾರ, ತಪ್ಪುಕಲ್ಪನೆ, ಮೂಢನಂಬಿಕೆ, ಸಂದೇಹ – ಇತ್ಯಾದಿಗಳಿಂದ ಅವರನ್ನು ಮುಕ್ತಗೊಳಿಸಬೇಕು. ಎಲ್ಲೆಡೆಯಲ್ಲೂ ಜನಜಾಗೃತಿಯನ್ನು ಉಂಟುಮಾಡಬೇಕು; ಜನಸಾಮಾನ್ಯರನ್ನು ಮೇಲಕ್ಕೆತ್ತಬೇಕು.
ಅಖಂಡ ಭಾರತದ ದಾರುಣ ಸ್ಥಿತಿಯ ಚಿಂತನೆಯು ಅವರ ಮನಸ್ಸನ್ನು ಹೊಕ್ಕಿತು.
“ ‘ಶಿವಭಾವದಿಂದ ಜೀವಸೇವೆ’ಯನ್ನು ಸಲ್ಲಿಸುವ ಮೂಲಕ, ಜೀವಿಯಲ್ಲಿ ಶಿವನನ್ನು ಕಾಣುವ ಆದರ್ಶ ಸೇವಾಭಾವನೆಯು ಜನರಲ್ಲಿ ಮೂಡುವಂತೆ ಮಾಡಬೇಕು.”
ಈ ರೀತಿಯ ನೂತನ ಸೇವಾಕಾರ್ಯವನ್ನು ಜಾರಿಗೊಳಿಸಲು, ಸ್ವಾಮಿ ವಿವೇಕಾನಂದರಿಗೆ ಹೊಸ ವಿಚಾರವೊಂದು ಹೊಳೆಯಿತು.
“ಸಂಪದ್ಭರಿತವಾದ ಪಾಶ್ಚಾತ್ಯ ದೇಶಗಳಿಗೆ ಹೋಗಿ ಅಲ್ಲಿ ಹಣವನ್ನು ಸಂಗ್ರಹಿಸಬೇಕು. ಅದಕ್ಕೆ ಪ್ರತಿಯಾಗಿ, ಭಾರತದ ಆಧ್ಯಾತ್ಮಿಕ ಜ್ಞಾನಸಂಪತ್ತನ್ನು ಪಾಶ್ಚಾತ್ಯರಿಗೆ ಧಾರೆ ಎರೆಯಬೇಕು.”

ಸ್ವಾಮೀಜಿಯವರು ಕನ್ಯಾಕುಮಾರಿಯಿಂದ ಚೆನ್ನೈ ತಲುಪಿದರು. ಸ್ವಾಮೀಜಿಯವರ ಸೇವಾಕಾರ್ಯದಲ್ಲಿ ಚೆನ್ನೈ ನಗರ ಮಹತ್ವದ ಸ್ಥಾನ ಪಡೆದಿದೆ. ಸ್ವಾಮೀಜಿ ತಮ್ಮ ನೈಜ ವ್ಯಕ್ತಿತ್ವವನ್ನು ಮೊದಲಬಾರಿಗೆ ಪ್ರಕಟಗೊಳಿಸಿದ್ದು ಚೆನ್ನೈನಲ್ಲಿಯೇ. ಅವರ ತೀಕ್ಷ್ಣಪ್ರತಿಭೆ ಅಲ್ಲಿನ ಯುವಜನತೆಯನ್ನು ಆಕರ್ಷಿಸಿತು. ಅವರ ಸುಸ್ಪಷ್ಟ ಇಂಗ್ಲಿಷ್ ಭಾಷಾಶೈಲಿ, ಮನಮುಟ್ಟುವಂತೆ ಆಧ್ಯಾತ್ಮಿಕ ವಿಷಯಗಳನ್ನು ಹೇಳುವ ಭವ್ಯರೀತಿ ಹಾಗೂ ತಮ್ಮ ದೈವೀವಾಣಿಯ ಮೂಲಕ ಪ್ರಾಚೀನ ಆಧ್ಯಾತ್ಮಿಕ ವಿಚಾರಗಳನ್ನು ಆಧುನಿಕ ಭಾಷೆಯಲ್ಲಿ ಹೇಳುವ ಬಗೆಗಳಿಂದ ಯುವಕರು ಅವರತ್ತ ಸೆಳೆಯಲ್ಪಟ್ಟರು. ಸ್ವಾಮೀಜಿ ಆ ಯುವಜನರ ಸರ್ವಮಾನ್ಯ ನಾಯಕರಾದರು.

